ಒಟ್ಟು 778 ನಿಮಿಷಗಳನ್ನು ವಿವಿಧ ರಾಜಕೀಯ ಪಕ್ಷಗಳಿಗೆ ಅಲಾಟ್ ಮಾಡಲಾಗಿದೆ. ಅಯಾಯ ಪಕ್ಷಗಳು ತಮಗೆ ನೀಡಿರುವ ಸಮಯವನ್ನು ಮೀರದಂತೆ ಮಾತನಾಡಬೇಕಾಗಿ ಬಿನ್ನವಿಸಿಕೊಳ್ಳುತ್ತೇನೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಅನಧಿಕೃತವಾಗಿ ಕೌಲಾಲಂಪುರದಿಂದ ಬಂದಿರುವ ವಿಮಾನದ ಬಗ್ಗೆ

ಶ್ರೀ ಎಲ್.ಆರ್. ಶಿವರಾಮೇಗೌಡ : ಉಪಾಧ್ಯಕ್ಷರೆ, ಅಕ್ರಮವಾಗಿ ಬೆಂಗಳೂರಿಗೆ ವಿಮಾನ ಬಂದಿದೆ ಎಂಬುದಾಗಿ ನಮಗೆ ಗೊತ್ತಾಗಿದೆ, ಅದು ನಿಜವೇ ಎನ್ನುವ ಬಗ್ಗೆ ಸರ್ಕಾರ ದಯಮಾಡಿ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಳಿಗ್ಗೆ ಕೌಲಾಲಂಪುರದಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ನಿಗೂಢವಾಗಿ ಒಂದು ವಿಮಾನ ಬಂದಿದೆ. ಅದರಲ್ಲಿ ಬಂದಂಥ ನಾಲ್ಕು ಜನರು ಯಾರಿಗೂ ತಿಳಿಯದ ರೀತಿಯಲ್ಲಿ ಕಣ್ಮರೆಯಾಗಿದ್ದಾರೆ. ಅವರನ್ನು ಹುಡುಕುವ ಕೆಲಸ ನಡೆಯುತ್ತಿದೆಯೆಂಬ ವಿಷಯ ತಿಳಿದು ಬಂದಿದೆ. ಅದರಲ್ಲಿ ಭಾರಿ ಶಸ್ತ್ರಾಸ್ತ್ರಗಳಿವೆಯಂತೆ! ಇದರ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಉಪಾಧ್ಯಕ್ಷರೆ, ಇನ್ನೂ ಅಧಿಕೃತವಾಗಿ ಏನೂ ಗೊತ್ತಾಗಿಲ್ಲ, ನಾವು ಸದನಕ್ಕೆ ಹೇಳಬೇಕಾದರೆ ಏನಾದರೂ ಆಧಾರಿಟಿ ಬೇಡವೇ?

ಶ್ರೀ ಡಿ.ಕೆ. ಶಿವಕುಮಾರ್ : ಉಪಾಧ್ಯಕ್ಷರೆ, ಒಂದು ಗಂಟೆ ಬಿಟ್ಟುಕೊಂಡು ಹೇಳಿಕೆ ಕೊಡಲಿ. ನಾಳೆ ಹೇಳಿಕೆ ಕೊಡುತ್ತೇವೆಂದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಸಾರ್ವಜನಿಕರ ಮೂಲಕ ಮತ್ತು ನಮಗೇನು ವಿಚಾರ ತಿಳಿದುಬರುತ್ತದೆ ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದೇ ಬೇಡವೇ? ಇದರ ಬಗ್ಗೆ ಅನುಮಾನ ಬಂದಿದೆ, ಭಯ ಬಂದಿದೆ.

ಉಪಾಧ್ಯಕ್ಷರು : ಈಗ ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರದ ಪರವಾಗಿ ದಯವಿಟ್ಟು ಹೇಳಿಕೆಯನ್ನು ಕೊಡಿಸಿ.

ಶ್ರೀ ಜೆ.ಹೆಚ್. ಪಟೇಲ್ : ಉಪಾಧ್ಯಕ್ಷರೆ, ಅದರ ಬಗ್ಗೆ ಅಧಿಕೃತವಾಗಿ ಮಾಹಿತಿಯನ್ನು ತರಿಸಿಕೊಂಡು ಸರ್ಕಾರ ಹೇಳಿಕೆಯನ್ನು ಕೊಡುತ್ತದೆ. ಅದಕ್ಕೇಕೆ ಅಷ್ಟೊಂದು ಆತುರ?

ಶ್ರೀ ಎಲ್.ಆರ್. ಶಿವರಾಮೇಗೌಡ : ನಾವು ಬೆಳಿಗ್ಗೆಯಿಂದ ಕುಳಿತುಕೊಂಡಿದ್ದೇವೆ, ಊಟಕ್ಕೆ ಹೋಗಲು ಅವಕಾಶ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ಅರ್ಧ ಗಂಟೆ ಊಟಕ್ಕೆ ಅವಕಾಶಕೊಟ್ಟರೆ ಒಳ್ಳೆಯದು. ಇಲ್ಲಿ ರೆಗ್ಯುಲರ್ ಆಗಿ ಕುಳಿತುಕೊಳ್ಳುವವರಿಗೆ ಬಹಳ ಕಷ್ಟವಾಗುತ್ತದೆ. ನಾವು ಬೆಳಿಗ್ಗೆ ಹತ್ತು ಗಂಟೆಗೆ ಬಂದರೆ ಸಂಜೆಯವರೆಗೆ ಕುಳಿತುಕೊಳ್ಳುವವರಿಗೆ ತೊಂದರೆಯಾಗುತ್ತದೆ. ಆದ್ದರಿಂದ 10-20 ನಿಮಿಷ ಊಟಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಬಿಸ್‌ನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದ ಪ್ರಕಾರ ಈ ವಾರ ಊಟಕ್ಕೆ ವಿರಾಮ ನೀಡಲಾಗುವುದಿಲ್ಲ, ತಾವು ಇದೊಂದು ವಾರ ಸಹಕಾರ ಮಾಡಬೇಕು.